ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 283 ಗ್ರಾಪಂಅ 2021

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:27-07-2021

**ಸುತ್ತೋಲೆ**

ವಿಷಯ: ಗ್ರಾಮ ಪಂಚಾಯಿತಿ ಮಹಿಳಾ ಉದ್ದೇಶಿತ ಆಯವ್ಯಯ ತಯಾರಿಕೆ ಕುರಿತು.

**ಉಲ್ಲೇಖ**
1. ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 06.02.2021 ರಂದು ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಸಭೆಯ ನಡವಳಿ.
2. ಸರ್ಕಾರ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 05 ಮತ್ತು 06 ಏಪ್ರಿಲ್-2021 ರಂದು ನಡೆದ ಕಾರ್ಯಗಾರದ ನಡವಳಿ.
3. ದಿನಾಂಕ:07-04-2021 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ.
4. ದಿನಾಂಕ:14-06-2021 ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ಶಿವಮೊಗ್ಗದಲ್ಲಿ ನಡೆದ ಸಭೆಯ ನಡವಳಿ.
5. ದಿನಾಂಕ: 02 ಮತ್ತು 03 ಜುಲೈ-2021 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಎ.ಎನ್.ಎಸ್.ಎಸ್.ಐ.ಆರ್.ಡಿ., ಮೈಸೂರಿನಲ್ಲಿ ನಡೆದ ಕಾರ್ಯಾಗಾರದ ನಿರ್ಣಯಗಳು.
6. ದಿನಾಂಕ: 15-7-2021 ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಿರ್ಣಯಗಳು.

* * * * *

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993, ಪ್ರಕರಣ 58 ರನ್ವಯ ಗ್ರಾಮ ಪಂಚಾಯಿತಿಯು ಮಹಿಳೆಯರ ಸಬಲೀಕರಣವು ಪ್ರಮುಖ ಕಾರ್ಯಗಳಲ್ಲೊಂದಾಗಿದೆ. ಮಹಿಳಾ ಸಬಲೀಕರಣವು ಶಿಕ್ಷಣ, ಆರೋಗ್ಯ, ಆಹಾರ ಪೌಷ್ಠಿಕಾಂಶ, ಜೀವನೋಪಾಯ, ನೀರು, ನೈರ್ಮಲ್ಯ ಮತ್ತು ಶುಚಿತ್ವ, ವಸತಿ, ಮಾನವ ಸಂಪನ್ಮೂಲ ಅಭಿವೃದ್ಧಿ, ವಿಕಲಚೇತನರ ಅಭಿವೃದ್ಧಿ, ಮಹಿಳಾ ಸುರಕ್ಷತೆ ಪ್ರಮುಖ ವಲಯಗಳಾಗಿರುತ್ತವೆ. ಪ್ರಸ್ತುತ ರಾಜ್ಯದಲ್ಲಿ ಲಿಂಗ ಸಮಾನತೆ ಕಾಯ್ದುಕೊಳ್ಳುವುದು, ಸಮಾನತೆಯಿಂದ ಕೂಡಿದ ಅವಕಾಶವನ್ನು ದೊರಕಿಸುವುದು ಹಾಗೂ ಮಹಿಳೆಯರ ಸಬಲೀಕರಣಗೊಳಿಸಲು ರಾಜ್ಯ ಸರ್ಕಾರವು 2007-08ನೇ ಸಾಲಿನಿಂದ ಮಹಿಳಾ ಉದ್ದೇಶಿತ ಆಯವ್ಯಯವನ್ನು ಶೇ.100 ರಷ್ಟು ಹಂಚಿಕೆ ಇರುವ ಮಹಿಳಾ ಆಧಾರಿತ ಯೋಜನೆಗಳು ಎಂದು "ಎ" ವರ್ಗೀಕರಣದಡಿ ಒದಗಿಸಲಾಗುತ್ತಿದೆ. ಅದೇ ರೀತಿ ಕನಿಷ್ಠ ಶೇ.30 ರಷ್ಟು ಹಂಚಿಕೆ ಇರುವ ಮಹಿಳಾ ಆಧಾರಿತ ಯೋಜನೆಗಳನ್ನು ವರ್ಗೀಕರಣ "ಬಿ" ಅಡಿಯಲ್ಲಿ ಒದಗಿಸಿ ರಾಜ್ಯದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯವನ್ನು ಪ್ರತಿ ಆರ್ಥಿಕ ಸಾಲಿನಲ್ಲಿ ಮಂಡಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ದಿನಾಂಕ:06-02-2021 ರಂದು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಸಭೆಯಲ್ಲಿ ಮಹಿಳಾ ಉದ್ದೇಶಿತ ಆಯವ್ಯಯ ತಯಾರಿಕೆ ಕುರಿತು ಚರ್ಚಿಸಲಾಗಿರುತ್ತದೆ. ಸದರಿ ವಿಷಯ ಕುರಿತು ಸುದೀರ್ಘವಾಗಿ ಸಂಬಂಧಪಟ್ಟ ಇಲಾಖೆಗಳೊಂದಿಗೆ ದಿನಾಂಕ:05 ಮತ್ತು 06, ಏಪ್ರಿಲ್ 2021

ರಂದು ನಡೆದ ಕಾರ್ಯಾಗಾರದಲ್ಲಿ ಗ್ರಾಮ ಪಂಚಾಯಿತಿಗಳು ಮಹಿಳಾ ಉದ್ದೇಶಿತ ಆಯವ್ಯಯವನ್ನು ತಯಾರಿಸಲು ಪೂರಕವಾದ ಅಂಶಗಳನ್ನು ಈ ಕೆಳಕಂಡಂತೆ ಚರ್ಚಿಸಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕಾಗಿ ಫಲಾನುಭವಿ ಆಧಾರಿತ ಯೋಜನೆಗಳಡಿಯಲ್ಲಿ ಶುಚಿ, ಚೇತನ, ಭಾಗ್ಯಲಕ್ಷ್ಮಿ, ಸಮೃದ್ಧಿ, ಸುರಕ್ಷಾ, ಆಶ್ರಯ, ಮನಸ್ವಿನಿ, ಸ್ವ ಸಹಾಯ ಗುಂಪುಗಳಿಗೆ ಸಹಾಯಧನ/ಕಿರುಸಾಲ, ಆಶಾ ಕಾರ್ಯಕರ್ತೆಯರಿಗೆ ಗೌರವಧನ ಇತ್ಯಾದಿಗಳನ್ನು ರಾಜ್ಯ ಆಯವ್ಯಯದಲ್ಲಿ ಒದಗಿಸಲಾಗುತ್ತಿದೆ.

ಮಹಿಳಾ ಆಯವ್ಯಯದ ಪರಿಕಲ್ಪನೆ ಮತ್ತು ದೃಷ್ಟಿಕೋನದ ಬಗ್ಗೆ ಚುನಾಯಿತ ಪ್ರತಿನಿಧಿಗಳು, ಇಲಾಖೆಗಳ ಅಧಿಕಾರಿಗಳು / ಸಿಬ್ಬಂದಿಗಳು, ಸಮುದಾಯ, ಸ್ವ-ಸಹಾಯ ಸಂಘ, ಸ್ವಯಂ ಸೇವಾ ಸಂಘಟನೆಗಳಿಗೆ ತರಬೇತಿ ನೀಡುವುದು. ತದನಂತರ ಸಂಪನ್ಮೂಲ ಕ್ರೋಢೀಕರಣದೊಂದಿಗೆ ಆಧ್ಯತೆ ನಿಗದಿಪಡಿಸಿ ಗ್ರಾಮ ಪಂಚಾಯಿತಿಗಳು ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು ಹಾಗೂ ಅದರ ಉಸ್ತುವಾರಿ / ಮೇಲ್ವಿಚಾರಣೆ ಮಾಡುವುದು ತದನಂತರ ಮೌಲ್ಯಮಾಪನ ಮತ್ತು ಅನುಸರಣಾ ಚಟುವಟಿಕೆಗಳನ್ನು ನಿರ್ವಹಿಸುವ ಕಾರ್ಯವನ್ನು ಸಹ ಗ್ರಾಮ ಪಂಚಾಯಿತಿಗಳು ನಿರ್ವಹಿಸಬಹುದಾಗಿದೆ.

ಗ್ರಾಮ ಪಂಚಾಯಿತಿಗಳು ಮಹಿಳಾ ಆಧಾರಿತ ಚಟುವಟಿಕೆ / ಕಾರ್ಯಕ್ರಮಗಳಿಗಾಗಿ ಮಹಿಳಾ ಆಧಾರಿತ (ಲಿಂಗಾಧಾರಿತ) ಆಯವ್ಯಯವನ್ನು ಅನುಬಂಧ-1 ರಲ್ಲಿ ನೀಡಿರುವ ನಮೂನೆಗಳನ್ವಯ ಸಿದ್ಧಪಡಿಸುವುದು.

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ:

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು.
3. ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು.

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
2. ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು
5. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಜಿಲ್ಲಾ ಪಂಚಾಯತ್ ಕಟ್ಟಡ, ಕೆ.ಜಿ.ರಸ್ತೆ, ಬೆಂಗಳೂರು.
6. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು.
7. ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ / ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
8. ಕಛೇರಿ ಪ್ರತಿ.

## ಅನುಬಂಧ – 1

## ಮಹಿಳಾ ಆಧಾರಿತ (ಲಿಂಗಾಧಾರಿತ) ಆಯವ್ಯಯ

| ಕ್ರ.ಸಂ. | ಗ್ರಾಮ ಪಂಚಾಯಿತಿ ಹೆಸರು | ಗ್ರಾಮದ ಹೆಸರು | ವಿಷಯ | ಅಂದಾಜು (ರೂ. ಲಕ್ಷಗಳಲ್ಲಿ |
|---|---|---|---|---|
| 1 | | | ಶಿಕ್ಷಣ | |
| 2 | | | ಆರೋಗ್ಯ | |
| 3 | | | ಆಹಾರ ಮತ್ತು ಪೌಷ್ಠಿಕಾಂಶ | |
| 4 | | | ಜೀವನೋಪಾಯ | |
| 5 | | | ನೀರು, ನೈರ್ಮಲ್ಯ ಮತ್ತು ಶುಚಿತ್ವ | |
| 6 | | | ವಸತಿ | |
| 7 | | | ಮಾನವ ಸಂಪನ್ಮೂಲ ಅಭಿವೃದ್ಧಿ | |
| 8 | | | ಮಹಿಳಾ ಸುರಕ್ಷತೆ | |
| 9 | | | ವಿಶೇಷ ಚೇತನರು | |

| ಕ್ರ.ಸಂ | ವಲಯ | ಚಟುವಟಿಕೆಗಳು | ಅಂದಾಜು (ರೂ. ಲಕ್ಷಗಳಲ್ಲಿ |
|---|---|---|---|
| 1 | ಶಿಕ್ಷಣ | 1. ಬಾಲಕಿಯರಿಗೆ ಉನ್ನತ ಶಿಕ್ಷಣ ಮಾಡಲು ಪ್ರೋತ್ಸಾಹ ಮತ್ತು ಕಲಿಕಾ ಸಾಧನಗಳು ನೀಡುವುದು | |
| | | 2. ಬಾಲಕಿಯರಿಗೆ ವೃತ್ತಿಪರ ಶಿಕ್ಷಣಕ್ಕೆ ಪ್ರೋತ್ಸಾಹ | |
| | | 3. ಕಾಲೇಜು ಮತ್ತು ಪದವಿ ಶಿಕ್ಷಣಕ್ಕೆ ಪ್ರೋತ್ಸಾಹ ಮತ್ತು ಬೆಂಬಲ ನೀಡುವುದು | |
| | | 4. ತಾಂತ್ರಿಕ ಶಿಕ್ಷಣಕ್ಕೆ ಪ್ರೋತ್ಸಾಹ | |
| | | 5. ಸಂಚಾರಿ ಗ್ರಂಥಾಲಯಗಳನ್ನು ಪ್ರಾರಂಭಿಸುವುದು | |
| | | 6. ಗ್ರಾಮದಲ್ಲಿ ಗ್ರಂಥಾಲಯದ ವ್ಯವಸ್ಥೆ ಕಲ್ಪಿಸುವುದು (ಮಹಿಳೆಯರಿಗೆ ಸಂಬಂಧಿಸಿದ ಉದ್ಯಮಶೀಲತೆ ಉತ್ತೇಜಿಸುವ ಪುಸ್ತಕಗಳನ್ನು ವಿತರಿಸುವುದು) | |
| | | 7. ಮಹಿಳೆಯರಿಗೆ ಗ್ರಾಮ ಪಂಚಾಯಿತಿಗಳ ಗ್ರಂಥಾಲಯಗಳ ಸದಸ್ಯತ್ವಕ್ಕೆ ಉಚಿತ ನೋಂದಣಿ | |
| | | 8. ವೈಯಸ್ಕರ ಶಿಕ್ಷಣಕ್ಕೆ ಪ್ರೋತ್ಸಾಹ | |
| | | 9. ಸಾಮಾಜಿಕ ಪಿಡುಗುಗಳ ಬಗ್ಗೆ ಅರಿವು ಕಾರ್ಯಕ್ರಮ<br>• ಶಾಲೆಯಿಂದ ಹೊರಗುಳಿದ ಮಕ್ಕಳು<br>• ಪ್ರೌಢಶಿಕ್ಷಣದಿಂದ ಹೊರಗುಳಿಯುವ ಹೆಣ್ಣು ಮಕ್ಕಳು<br>• ಬಾಲ್ಯ ವಿವಾಹ<br>• ಬಾಲ ಕಾರ್ಮಿಕತೆ<br>• ಮಕ್ಕಳ ಹಕ್ಕುಗಳು<br>• ಮಹಿಳೆಯರ ಹಕ್ಕುಗಳು<br>• ಮಹಿಳಾ ಸಂರಕ್ಷಣಾ ಕಾಯಿದೆಗಳು | |
| 2 | ಆರೋಗ್ಯ | 1. ಲಸಿಕಾ ಕಾರ್ಯಕ್ರಮ ಆಯೋಜನೆಗೆ ಸಹಕಾರ | |
| | | 2. ಸಾಂಸ್ಥಿಕ ಹೆರಿಗೆಗಾಗಿ ವಾಹನ ಸೌಕರ್ಯ ಒದಗಿಸುವುದು | |
| | | 3. ಅರಿವು ಕಾರ್ಯಕ್ರಮ<br>• ಸಾಂಕ್ರಾಮಿಕ ರೋಗಗಳು | |

| ಕ್ರ.ಸಂ | ವಲಯ | ಚಟುವಟಿಕೆಗಳು | ಅಂದಾಜು (ರೂ. ಲಕ್ಷಗಳಲ್ಲಿ |
|---|---|---|---|
| | | • ಶಿಶು ಮರಣ<br>• ತಾಯಂದಿರ ಮರಣ<br>• ಭ್ರೂಣ ಲಿಂಗ ಪತ್ತೆ ನಿಷೇಧ<br>• ತಾಯಂದಿರು ಮತ್ತು ಮಕ್ಕಳ ರಕ್ತ ಹೀನತೆ<br>• ಸಾಮಾಜಿಕ ಮತ್ತು ಮಾನಸಿಕ ಆರೋಗ್ಯ | |
| | | 4. ಆರೋಗ್ಯ ತಪಾಸಣ ಶಿಬಿರ ಆಯೋಜನೆ | |
| | | 5. ಜನನ ನೋಂದಣಿ ಮತ್ತು ಪ್ರಮಾಣಪತ್ರ ವಿತರಿಸುವುದು | |
| | | 6. ನಿರ್ಗತಿಕ ಮಹಿಳೆಯರಿಗೆ ಆರೋಗ್ಯದ ಬೆಂಬಲ | |
| 3 | **ಆಹಾರ ಮತ್ತು ಪೌಷ್ಠಿಕಾಂಶ** | 1. ಗ್ರಾಮ ಪಂಚಾಯಿತಿ ಹಂತದ ಪೌಷ್ಠಿಕಾಂಶ ತೋಟ (ಲಭ್ಯವಿರುವ ಪಂಚಾಯಿತಿ/ಸರ್ಕಾರಿ ಭೂಮಿಯಲ್ಲಿ) ಮಾಡುವುದು | |
| | | 2. ಮನೆಯಲ್ಲಿ ಕೈ ತೋಟ ಬೆಳೆಸಲು ಪ್ರೋತ್ಸಾಹ | |
| | | 3. ಅರಿವು ಕಾರ್ಯಕ್ರಮ<br>• ಸ್ಥಳೀಯ ಆಹಾರೋತ್ಪನ್ನಗಳನ್ನು ಬಳಸುವುದು<br>• ಉತ್ತಮ ಆಹಾರ ಪದ್ಧತಿ ಬಗ್ಗೆ ಅರಿವು | |
| | | 4. ಮಹಿಳೆಯರ ರಕ್ತ ಹೀನತೆಯನ್ನು ತಡೆಯಲು ಪೌಷ್ಠಿಕಾಂಶಗಳನ್ನು ವಿತರಿಸುವುದು ಮತ್ತು ಅರಿವು ಮೂಡಿಸುವ ಕಾರ್ಯಕ್ರಮವನ್ನು ಆಯೋಜಿಸುವುದು. | |
| 4 | **ಜೀವನೋಪಾಯ** | 1. ಮಹಾತ್ಮಾ ಗಾಂಧಿ ನರೇಗಾ ಯೋಜನೆಯಡಿ ಕಾಮಗಾರಿಗಳಿಗೆ ಕನಿಷ್ಠ 50% ಮಹಿಳೆಯರಿಗೆ ಆದ್ಯತೆ ನೀಡುವುದು | |
| | | 2. ಮಹಾತ್ಮಾ ಗಾಂಧಿ ನರೇಗಾ ಯೋಜನೆಯಡಿ ಕೆಲಸ ಒದಗಿಸುವುದು ಮತ್ತು ಪ್ರಾಥಮಿಕ ಸೌಲಭ್ಯ ಕಲ್ಪಿಸುವುದು.<br>• ಕಾಮಗಾರಿ ಸ್ಥಳದಲ್ಲಿ ತಾತ್ಕಾಲಿಕವಾಗಿ ಶೌಚಾಲಯ ವ್ಯವಸ್ಥೆ ಕಲ್ಪಿಸುವುದು<br>• ಶಿಶು ಪಾಲನಾ ಕೇಂದ್ರ ( 5ಕಿಂತ ಹೆಚ್ಚು ಮಕ್ಕಳು 3 ವರ್ಷದೊಳಗಿದ್ದಲ್ಲಿ) | |
| | | 3. ಸ್ವಯಂ ಉದ್ಯೋಗಗಳಿಗೆ ಪ್ರೋತ್ಸಾಹ–<br>• ಮಹಿಳಾ ಒಕ್ಕೂಟದೊಂದಿಗೆ ಘನ ತ್ಯಾಜ್ಯ ನಿರ್ವಹಣೆಯಿಂದ ಆದಾಯಗಳಿಸುವುದು.<br>• ಕೌಶಲ್ಯಭಿವೃದ್ಧಿ ತರಬೇತಿಗಳನ್ನು ಗ್ರಾಮಗಳ ಮಟ್ಟದಲ್ಲಿ ಆಯೋಜಿಸುವುದು ಘಟಕಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸುವುದು | |
| | | 4. ಮಹಿಳಾ ವರ್ಕ್‌ಶೆಡ್ ನಿರ್ಮಾಣ | |
| | | 5. ಒಣ ಮತ್ತು ದ್ರವ ತ್ಯಾಜ್ಯ ಘಟಕ ಸ್ಥಾಪನೆ ಮತ್ತು ನಿರ್ವಹಣೆಯಲ್ಲಿ ಎಸ್. ಎಚ್. ಜಿ ಮಹಿಳೆಯರನ್ನು ತೊಡಗಿಸಿಕೊಳ್ಳುವುದು | |
| | | 6. ವಾಹನ ಚಾಲನೆಗೆ ತರಬೇತಿ ಮತ್ತು ವಾಹನ ಕಲಿಕೆಗೆ ಚಾಲನೆಯ ಪರವಾನಿಗೆ ಕೊಡಿಸುವುದು | |
| | | 7. ವರ್ಕ್‌ಶೆಡ್‌ಗೆ ಪಿಠೋಪಕರಣಗಳನ್ನು, ಸಿ.ಸಿ ಟಿ.ವಿ ಅಳವಡಿಕೆ, ಮೈಕ್ ಮತ್ತು ಸ್ಪೀಕರ್ ಅಳವಡಿಕೆ. ಪ್ರೊಜೆಕ್ಟರ್. ಕಂಪ್ಯೂಟರೀಕರಣ ಒದಗಿಸುವುದು | |

| ಕ್ರಸಂ | ವಲಯ | ಚಟುವಟಿಕೆಗಳು | ಅಂದಾಜು (ರೂ. ಲಕ್ಷಗಳಲ್ಲಿ |
|---|---|---|---|
| | | 8. ಹಳ್ಳಿ ಸಂತೆ ಆರಂಬಿಸುವುದು ಮತ್ತು ಮಹಿಳೆಯರಿಗೆ ಪ್ರಾಮುಖ್ಯತೆ ನೀಡುವುದು | |
| | | 9. ಸೂಪರ್ ಮಾರ್ಕೆಟ್ ಸ್ಥಾಪನೆಗೆ ಸಹಕಾರ & ಬೆಂಬಲ (ತಾಲ್ಲೂಕು/ಜಿಲ್ಲಾ ಕೇಂದ್ರ)-ಜಿಪಿಎಲ್ಎಫ್ ಗಳಿಗೆ | |
| | | 10. ಸಾವಯವ ಗೊಬ್ಬರ ಉತ್ಪಾದನೆ ಮತ್ತು ಕೃಷಿಗೆ ಪ್ರೋತ್ಸಾಹ | |
| | | 11. ನರ್ಸರಿ (ಗಿಡಗಳ) ಪ್ರಾರಂಭಿಸಲು ಪ್ರೋತ್ಸಾಹ | |
| | | 12. ಹಾಲು ಉತ್ಪಾದಕರ ಸಂಘ ಬೆಂಬಲ | |
| | | 13. ದೇಶಿ/ಹವ್ಯಾಸಿ ಮಹಿಳಾ ಕಲೆಗಳಿಗೆ ಪ್ರೋತ್ಸಾಹ | |
| | | 14. ಶುಚಿ ಪ್ಯಾಡ್ ತಯಾರಿಸುವ ಘಟಕ ಸ್ಥಾಪನೆ | |
| | | 15. ಮಹಿಳಾ ಗ್ರಾಮ ಸಭೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಮತ್ತು ತಯಾರಿ | |
| 5 | ನೀರು, ನೈರ್ಮಲ್ಯ ಮತ್ತು ಶುಚಿತ್ವ | 1. ಮಹಿಳಾ ಆಧಾರಿತ ಕುಟುಂಬಕ್ಕೆ ಉಚಿತವಾಗಿ ಶುದ್ಧ ಕುಡಿಯುವ ನೀರಿನ ಫಿಲ್ಟರ್ ನೀಡುವುದು. | |
| | | 2. ಮಹಿಳೆಯ ವೈಯಕ್ತಿಕ ಶುಚಿತ್ವದ ಅರಿವು ಕಾರ್ಯಕ್ರಮ | |
| | | 3. ಮಹಿಳಾ ವರ್ಕ್‌ಶೆಡ್‌ಗಳಿಗೆ ಉಚಿತ ನಳದ ಸಂಪರ್ಕ ಒದಗಿಸುವುದು | |
| | | 4. ಸ್ಯಾನಿಟೈಜರ್/ಸ್ಯಾನಿಟೈಜೇಶನ್‌ಗಳನ್ನು ಕೆಲಸದ ಸ್ಥಳದಲ್ಲಿ ಒದಗಿಸುವುದು | |
| | | 5. ಮೆನ್‌ಸ್ಟ್ರಲ್ ಕಪ್ ಬಳಕೆಗೆ ಪ್ರೋತ್ಸಾಹಿಸುವುದು ಅದರ ಬಗ್ಗೆ ಅರಿವು ಮೂಡಿಸುವುದು | |
| | | 6. ಇನ್ಸಿನಿರೇಟರ್ ಸ್ಥಾಪಿಸುವುದು | |
| 6 | ವಸತಿ | 1. ಸರ್ಕಾರಿ ವಸತಿ ಯೋಜನೆಯಡಿ ನಿವೇಶನ ಒದಗಿಸುವುದು | |
| | | 2. ಸರ್ಕಾರಿ ವಸತಿ ಯೋಜನೆಯಡಿ ಮನೆ ನಿರ್ಮಾಣ | |
| | | 3. ಸರ್ಕಾರಿ ವಸತಿ ಯೋಜನೆಯಡಿ ಮನೆ ರಿಪೇರಿಗೆ ಅನುದಾನ | |
| | | 4. ಶೇ.25 ರ ಅನುದಾನದಿಂದ ಎಸ್.ಸಿ/ಎಸ್.ಟಿ ಯವರಿಗೆ ಉಚಿತ ನಳ ಸಂಪರ್ಕ ಒದಗಿಸುವುದು. | |
| 7 | ಮಾನವ ಸಂಪನ್ಮೂಲ ಅಭಿವೃದ್ಧಿ | 1. ಸಂವಹನ ಕೌಶಲ್ಯ ಅಭಿವೃದ್ಧಿ – ತರಬೇತಿ ಕಾರ್ಯಕ್ರಮಗಳು | |
| | | 2. ಅಲ್ಪಾವಧಿ ವೃತ್ತಿಪರ ಕೋರ್ಸ್‌ಗಳು | |
| | | 3. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಗೆ ಸಹಾಯಧನ | |
| | | 4. ಬಾಲಕಿಯರ ಕ್ರೀಡಾ ಕೂಟ ಆಯೋಜನೆ | |
| | | 5. ಉನ್ನತ ಸಾಧನೆಗೈದ ಮಹಿಳಾ ಕ್ರೀಡಾ ಪಟುಗಳಿಗೆ ಪ್ರೋತ್ಸಾಹ | |
| | | 6. ವೃತ್ತಿಪರ ಮಾರ್ಗದರ್ಶನ ಕಾರ್ಯಕ್ರಮಗಳ ಆಯೋಜನೆ | |
| 8 | ಮಹಿಳಾ ಸುರಕ್ಷತೆ | 1. ಸ್ವಯಂ ರಕ್ಷಣಾ ತರಬೇತಿ – ಕರಾಟೆ,ಕುಸ್ತಿ, ಇತರೆ | |
| | | 2. ಸಾಮಾಜಿಕ ಪಿಡುಗುಗಳು | |
| | | 3. ಕಾನೂನು ಮತ್ತು ಕಾನೂನಿನ ಬೆಂಬಲ ಅರಿವು ಕಾರ್ಯಕ್ರಮ | |
| | | 4. ಸಮುದಾಯ ಆರಕ್ಷಕ ಸೇವೆ | |
| | | 5. ಯುದ್ಧದಲ್ಲಿ ಮೃತಪಟ್ಟ ಸೈನಿಕನ ಪತ್ನಿ ಆಸ್ತಿಗೆ ತೆರಿಗೆ ವಿನಾಯಿತಿ | |
| | | 6. ಮಹಿಳೆಯರಿಗೆ ಆಧಾರ್, ಚುನಾವಣೆ, ಇತರೆ ಗುರುತಿನ ಚೀಟಿ ಒದಗಿಸುವುದು | |

| ಕ್ರ.ಸಂ | ವಲಯ | ಚಟುವಟಿಕೆಗಳು | ಅಂದಾಜು (ರೂ. ಲಕ್ಷಗಳಲ್ಲಿ |
|---|---|---|---|
| 9 | ವಿಶೇಷ ಚೇತನರು | 1. ಅಂಧರಿಗಾಗಿ ಬ್ರೇಲಿ ಪುಸ್ತಕ | |
| | | 2. ಕಿವಿ ಕೇಳಿಸುವ ಸಲಕರಣೆಗಳು | |
| | | 3. ಕೃತಕ ಕಾಲು/ಕೈಗಳ ಜೋಡಣೆ | |
| | | 4. ತ್ರಿಚಕ್ರ ವಾಹನ | |
| | | 5. ಅಪಘಾತಗಳಿಂದ ವಿಶೇಷ ಚೇತನರಾದವರಿಗೆ ಸಲಕರಣೆಗಳ ವಿತರಣೆ | |

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ